of the District Judge. Therefore I am asking whether in this, both the District Judge and the Deputy Commissioner have recommended the names of all the 15 persons.

Sri M. V. RAMA RAO.—There are only 14 applicants and 14 names have not been recommended by any authority.

ಶ್ರೀ ಜಿ. ಮರುಳಪ್ಪ.—ಈ ರೀತಿ ಡಿಸ್ಟ್ರಿಕ್ಟ್ ಜಡ್ಜರವರು ರೆಕಮಂಡೇಷನ್ ಮಾಡುವುದಕ್ಕೆ, ನೀವಾಗಿ ನೀವೇ ನಿಮಗೆ ಬೇಕಾದವರನ್ನು ಶಿಫಾರಸು ಮಾಡಬೇಕೆಂದು ಇನ್‌ಫ್ಲೂಯನ್ಸ್ ಮಾಡಿರುವುದು ನಿಜವೇ ?

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಲ್ಲ.

Sri C. J. MUCKANNAPPA.—May I know the names of the persons in the panel sent to Government by the District Judge ?

Sri M. V. RAMA RAO.—That again indirectly seeks the disclosure of the recommendation made, which is confidential in nature.

Sri C. J. MUCKANNAPPA.—I do not want the names. There are 14 people and there was a panel submitted to the Government by the District Judge. May I know how many people were there in the list, whether two or three ? I do not want disclosure of any name.

Sri M. V. RAMA RAO.—Three names were contained in the panel.

Sri S. SIVAPPA.—While making the appointments of Public Prosecutors and Government Pleaders, what are the informations required by the Government ? May I know whether the Government called for names from the District Judge or to send a panel or what is the information the Government calls for from the District Judge ?

Sri M. V. RAMA RAO.—The District Magistrate and the District and Sessions Judge are addressed by the Government with a view to ascertain the suitability of a particular Advocate who can be entrusted with the office of Public Prosecutor. All qualifications which are necessary for holding the office of the Public Prosecutor will have to be taken into consideration before either the District Judge or the District Magistrate make any recommendation, either separately or jointly.

Survey on Unemployment.

*Q.—678. Sri C. R. RANGE GOWDA (Magadi).—

Will the Chief Minister be pleased to state :—

(*a*) whether they have made any survey to find out the extent of unemployment of the able bodied men and women in the State and if so what is the number of such unemployed persons ;

(*b*) what are all the steps taken by the Government to solve the question of unemployment problem of such persons ?

A.—Sri D. DEVARAJ URS (Minister for Transport and Tourism) [on behalf of Sri S. NIJALINGAPPA (Chief Minister)].—

(*a*) No. However, during 1963-64 a Sample Survey on employment unemployment and extent of labour force was undertaken in urban areas of the State as part of the National Sample Survey.

Out of the estimated population of 47,20,000 in urban areas 14,84,625 persons were in labour force (31 per cent). Out of this, 14,62,725 (98 per cent) were employed, leaving only 2 per cent of the labour force unemployed.

(*b*) The implementation of the various plan programmes under the successive Five-Year Plans would result in extending employment opportunities.

ಶ್ರೀ ಸಿ. ಆರ್. ರಂಗೇಗೌಡ.—(ಎ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರು ಗ್ರಾಮಾಂತರ ಗಳನ್ನು ಬಿಟ್ಟು ಪಟ್ಟಣಗಳಲ್ಲಿ ಮಾತ್ರ ನ್ಯಾಷನಲ್ ಸ್ಯಾಂಪಲ್ ಸರ್ವೆ ಮೂಲಕ ಸರ್ವೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಅಗ್ರಿಕಲ್ಚರಲ್ ಲೇಬರರ್ಸ್ ಆಗಲಿ, ವಿದ್ಯಾವಂತ ನಿರುದ್ಯೋಗಿಗಳಾಗಲಿ ಇಲ್ಲ, ಅವರಿಗೆಲ್ಲಾ ಕೆಲಸ ದೊರೆತಿದೆ ಎಂದು ಸರ್ಕಾರದವರ ಭಾವನೆಯೇ ?

†ಶ್ರೀ ಡಿ. ದೇವರಾಜ ಅರಸ್.—ಗ್ರಾಮಾಂತರವಲ್ಲೂ ಕೂಡ ಸರ್ವೆ ಮಾಡಿದ್ದಾರೆ, ಆದರೆ ಎಲ್ಲಾ ಹಳ್ಳಿಯಲ್ಲೂ ಸರ್ವೆ ಮಾಡಿಲ್ಲ. ಸ್ಯಾಂಪಲ್ ಸರ್ವೆಯಲ್ಲೂ ಕೂಡ ಅಗ್ರಿಕಲ್ಚರಲ್ ಲೇಬರ್ ಎನ್‌ಕ್ವೈರಿ ಕಮಿಟಿ ಅಂತ ಹೇಳಿ ಇರುವುದರಿಂದ ರೂರಲ್ ಲೇಬರ್ ಸರ್ವೆ ನಡೆದಿದೆ. ನಮ್ಮಾರು 3ನೇ ಪಂಚವಾರ್ಷಿಕ ಯೋಜನೆಯ ಅಂತ್ಯದವರೆಗೂ 12.7 ಲಕ್ಷ ಜನ ನಿರುದ್ಯೋಗಿಗಳು ಇದ್ದಾರೆ ಎಂಬುದಾಗಿ ಅಂದಾಜು ಮಾಡಲಾಗಿದೆ. ಇದು ರೂರಲ್ ಮತ್ತು ಅರ್ಬನ್ ಎರಡಕ್ಕೂ ಅನ್ವಯಿಸತಕ್ಕ ಅಂಕಿ ಅಂಶ.

ಶ್ರೀ ಸಿ. ಆರ್. ರಂಗೇಗೌಡ.—ಇದೇ ರೀತಿ ಒಂದು ಪ್ರಶ್ನೆ ಈ ಸಭೆಯಲ್ಲಿ ಬಂದಾಗ ಮಾನ್ಯ ಮಂತ್ರಿಗಳು ವಿದ್ಯಾಭ್ಯಾಸದಲ್ಲೂ ಕೂಡ ಲೋಪದೋಷವಿರುವುದರಿಂದ ನಿರುದ್ಯೋಗ ಜಾಸ್ತಿಯಾಗಿದೆ ಎಂದು ಹೇಳುತ್ತಾ ಇದ್ದರು. ಗುಮಾಸ್ತರನ್ನು ತಯಾರು ಮಾಡತಕ್ಕಂತಹ ವಿದ್ಯಾಭ್ಯಾಸವನ್ನು ಕೊಡುತ್ತಾ ಇರುವುದರಿಂದ ಜನರಿಗೆ ಕೈಕಸಬಿನ ಅನುಭವವಿಲ್ಲದೆ, ಎಸ್.ಎಸ್.ಎಲ್.ಸಿ. ಆದಮೇಲೆ ಅಥವಾ ಡಿಗ್ರಿ ತೆಗೆದುಕೊಂಡ ಮೇಲೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಿಗೆ ಹೋಗಿ ಹೆಸರು ಗಳನ್ನು ರಿಜಿಸ್ಟರ್ ಮಾಡಿಸಿಕೊಂಡರೂ ಕೆಲಸ ದೊರೆಯದೆ ಇದ್ದು ಅನುಭವವಿಲ್ಲದೇ ಇರುವುದರಿಂದ, ವಿದ್ಯಾಭ್ಯಾಸದಲ್ಲಿ ಒಂದು ಕುಂದುಕೊರತೆ ಇರುವುದರಿಂದ ಸರ್ಕಾರದವರು ಏನಾದರೂ ಒಂದು ಕಾರ್ಯಕ್ರಮವನ್ನು ಕೈಕೊಂಡು ಜನಗಳಿಗೆ ಕೈಕಸಬು ಕಲಿಸುವ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿಸ ಬೇಕೆನ್ನುವಂತಹ ತೀರ್ಮಾನ ಮಾಡಲಾಗಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಜನರಲ್ ಎಜ್ಯುಕೇಷನ್ ಜೊತೆಗೆ ಟೆಕ್ನಿಕಲ್ ಎಜ್ಯುಕೇಷನ್ ಕೊಡುವುದರ ಬಗ್ಗೆ ಸಾಕಾದಷ್ಟು ಪ್ರಯತ್ನಗಳನ್ನು ನಡೆಸುತ್ತಾ ಇದ್ದೇವೆ. ಹೊಸದಾಗಿ ಮೆಡಿಕಲ್ ಕಾಲೇಜು, ಇಂಜನಿಯರಿಂಗ್ ಕಾಲೇಜುಗಳನ್ನು ತೆರೆದಿದ್ದೇವೆ. ಪಾಲಿಟೆಕ್ನಿಕ್ಸ್ ಇವೆ. ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್ಸ್ ಇವೆ. ಇಷ್ಟೆಲ್ಲಾ ಪ್ರಯತ್ನ ನಡೆಯುತ್ತಾ ಇರುವುದರಿಂದ ಇದೆಲ್ಲಾ ಜಾಬ್ ಓರಿಯೆಂಟೆಡ್ ಎಜ್ಯುಕೇಷನ್ ಕೊಡಬೇಕೆಂಬ ದೃಷ್ಟಿಯಿಂದಲೇ ನಡೆಯುತ್ತಾ ಇದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಇಂಡಸ್ಟ್ರಿಯಲ್ ಟ್ರೈನಿಂಗ್ ಸ್ಕೂಲ್‌ಗಳು ಇವೆ, ಟ್ರೈನಿಂಗ್ ಕೊಡುತ್ತಾ ಇದ್ದೇವೆ, ಇದೆಲ್ಲಾ ಪಂಚವಾರ್ಷಿಕ ಯೋಜನೆ ಪುಸ್ತಕದಲ್ಲಿ ಇದೆ ಎಂದು ಹೇಳುತ್ತಾ ಹೋದರು. ಪುಸ್ತಕದಲ್ಲಿ ಇದೆ ನಿಜ. ಆದರೆ ಕಾರ್ಯಗತವಾಗಿಲ್ಲ. ಸಿವಿಲ್ ಇಂಜನಿಯರಿಂಗ್ ಮತ್ತು ಮೆಕ್ಯಾನಿಕಲ್ ಇಂಜನಿಯರಿಂಗ್ ಪಾಸ್ ಆಗಿರತಕ್ಕ ಸಾವಿರಾರು ಜನ ಹುಡುಗರು ಕೆಲಸ ವಿಲ್ಲದೆ ಬೀದಿ ಬೀದಿ ತಿರುಗುತ್ತಾ ಇದ್ದಾರೆ, ಇದು ತಮ್ಮ ಗಮನಕ್ಕೆ ಬಂದಿದೆಯೆ ? ಪಂಚವಾರ್ಷಿಕ ಯೋಜನೆಯ ಪುಸ್ತಕ ತೋರಿಸಿದರೆ ಜನರ ಹೊಟ್ಟೆ ತುಂಬುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್.—3 ನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲೂ ಕೂಡ 12 ಲಕ್ಷ ಚಿಲ್ಲರೆ ಜನರು ಹಳ್ಳಿ ಮತ್ತು ಪಟ್ಟಣಗಳಲ್ಲಿರತಕ್ಕ ಎಲ್ಲಾ ವರ್ಗದ ಜನರೂ ನಿರುದ್ಯೋಗಿ

ಗಳಾಗಿ ಇರುತ್ತಾರೆ. ಅವರ ಪೈಕಿ ನಮ್ಮ ಕಾರ್ಯಕ್ರಮದ ಪ್ರಕಾರ ಹಣ ಖರ್ಚು ಮಾಡಿದರೂ ಇನ್ನೂ 5-6 ಲಕ್ಷ ಜನರು ಹಾಗೆಯೇ ಉಳಿಯುತ್ತಾರೆ. ಇದು ನಿಜವಾಗಿಯೂ ನಮ್ಮ ಮುಂದಿರುವ ಸಮಸ್ಯೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲೂ ಸರ್ಕಾರದವರು ಹೆಚ್ಚು ಹಣವನ್ನು ಖರ್ಚು ಮಾಡಿ ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳನ್ನೂ ನೀರಾವರಿ ಯೋಜನೆಗಳನ್ನೂ ಮತ್ತು ರಸ್ತೆ ಕಾಂಗಾರಿ ಇತ್ಯಾದಿ ಕೆಲಸಗಳನ್ನು ಕೈಗೊಂಡು 150 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 150 ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ಕಡೆ 250 ಕೋಟಿ ಖರ್ಚು ಮಾಡಿದರೆ ಆಗ ಈ ನಿರುದ್ಯೋಗ ಸಮಸ್ಯೆ ಇನ್ನಷ್ಟು ಕಡಿಮೆಯಾಗಬಹುದು. ನಮ್ಮ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಖರ್ಚುಮಾಡಬೇಕೆಂದಿರುವ 250 ಕೋಟಿಗೆ ಬದಲಾಗಿ 500 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ಆಗ ಈ ಸಮಸ್ಯೆಯನ್ನು ಇನ್ನೂ ಕಡಮೆ ಮಾಡ ಬಹುದು, ಅಥವಾ 1000 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ನಿರುದ್ಯೋಗ ಸಮಸ್ಯೆಯೇ ಇಲ್ಲದಂತಾಗಬಹುದು. ಆದರೆ ಆ ಹಣವನ್ನು ಎಲ್ಲಿಂದ ತರುವುದು? ಹಣದ ಸಮಸ್ಯೆಯನ್ನು ಮೊದಲು ಬಗೆಹರಿಸಿದರೆ ಆ ನಂತರ ಉಳಿದವುಗಳನ್ನು ಬಗೆಹರಿಸುವುದು ಸುಲಭ, ಆದರೆ ನಿರುದ್ಯೋಗ ಸಮಸ್ಯೆಯ ಜೊತೆಯಲ್ಲಿ ಹಣದ ಸೌಕರ್ಯವೂ ಒಡಬೇಕೆಂದರೆ ಅದು ಸಾಧ್ಯವಿಲ್ಲ; ಬಹಳ ಕಷ್ಟ.

ಶ್ರೀ ಕೆ. ಲಕ್ಕಪ್ಪ.—ಒಂದಾದಮೇಲೆ ಒಂದರಂತೆ ಬರುವ ಪಂಚವಾರ್ಷಿಕ ಯೋಜನೆಗಳ ಮೇರೆಗೆ ವಿವಿಧ ಯೋಜನಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದರಿಂದ ಉದ್ಯೋಗಾವಕಾಶವನ್ನು ಕಲ್ಪಿಸಬಹುದಾಗಿದೆ ಎಂಬುದಾಗಿ ಉತ್ತರದಲ್ಲಿ ತಿಳಿಸೋಣವಾಗಿದೆ—ಆದರೆ ಇತ್ತೀಚೆಗೆ ನಮ್ಮ ಪ್ರಧಾನಿಯವರು ಹಣವನ್ನು ಹೆಚ್ಚು ಹೆಚ್ಚು ಖರ್ಚುಮಾಡುವುದಕ್ಕೆ ಸಾಧ್ಯವಿಲ್ಲ ಅಥವಾ ಸಂಭವಗಳಿಲ್ಲವೆಂಬುದಾಗಿ ಅಪ್ಪಣೆಕೊಡಿಸಿರುವಾಗ ನಮ್ಮ ಸರ್ಕಾರದವರು ನಿರುದ್ಯೋಗ ಸಮಸ್ಯೆಯನ್ನು ಎಷ್ಟರಮಟ್ಟಿಗೆ ಬಗೆಹರಿಸಲು ಸಾಧ್ಯವಿದೆ ಎನ್ನುವುದರ ಅಂಗವಾಗಿ ದೇಶಕ್ಕೇನು ಮಾರ್ಗದರ್ಶನ ಹಾಕಿಕೊಟ್ಟಿದ್ದಾರೆ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶಕ್ಕೆ ಆಗುವಷ್ಟು ಒಂದು ಸಂಕ್ಷಿಪ್ತ ಕಾರ್ಯಕ್ರಮದ ಪಟ್ಟಿ ಇದೆ, ಅದಕ್ಕೆ ತಕ್ಕಷ್ಟು ಹಣವೂ ನಮ್ಮಲ್ಲಿದೆ. ಆದರೆ ನಾವೀಗ ಖರ್ಚುಮಾಡುವುದಕ್ಕಿಂತ 3—4ರಷ್ಟು ಹೆಚ್ಚು ಹಣವನ್ನು ಖರ್ಚುಮಾಡಬೇಕೆಂದರೆ ಅದು ಸಾಧ್ಯವಿಲ್ಲ. ಆದರೆ ಇತ್ತೀಚೆಗೆ ಜನ ಸಂಖ್ಯೆ ಬೇರೆ ಜಾಸ್ತಿಯಾಗುತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಜನಸಂಖ್ಯೆ ಜಾಸ್ತಿಯಾದರೇನು, ಮಕ್ಕಳಿಗೇನೂ ಉದ್ಯೋಗ ಒದಗಿಸಬೇಕಾಗಿಲ್ಲ. ಆದರೆ 1, 2 ಮತ್ತು 3ನೇ ಪಂಚವಾರ್ಷಿಕ ಯೋಜನೆಗಳು ಬಂದನಂತರವೇ ಅಲ್ಲವೇ ಈ ನಿರುದ್ಯೋಗ ಸಮಸ್ಯೆ ಹೆಚ್ಚಿಗೆ ಆದದ್ದು?

ಶ್ರೀ ಡಿ. ದೇವರಾಜ ಅರಸ್.—ನಾನು ಜನಸಂಖ್ಯೆ ಜಾಸ್ತಿಯಾಗುತ್ತಿದೆ ಎಂದು ಹೇಳಿದ್ದು 15 ವರ್ಷಕ್ಕೆ ಮೇಲ್ಪಟ್ಟು ಮತ್ತು 60 ವರ್ಷ ವಯಸ್ಸಿನೊಳಗಿರತಕ್ಕ ಜನರಿಗೆ ಉದ್ಯೋಗ ದೊರಕಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡೇ ಅದನ್ನು ಹೇಳಿದ್ದು. ನಾವು ಇಷ್ಟೆಲ್ಲಾ ಪ್ರಯತ್ನಗಳನ್ನು ಮಾಡಿದಮೇಲೂ 3ನೇ ಪಂಚವಾರ್ಷಿಕ ಯೋಜನೆಯ ಕೊನೆಗೆ ಇನ್ನೂ 12 ಲಕ್ಷ ಚಿಲ್ಲರೆ ಜನರು ಹಾಗೇ ಉಳಿಯುತ್ತಾರೆ.

Mr. SPEAKER.—We shall take Questions Nos. 564 and 585 and 618 together as they relate to the same subject.

Supply of Pumpsets

*Q.—564. Sri B. J. LINGE GOWDA (Channapatna).—

Will the Minister for Public Works be pleased to state: —

(*a*) the total number of applications received for supply of pumpsets in Bangalore Rural District for the past three years (separate figures for Diesel and Electric Pumpsets to be furnished);